**ಸರಕಾರಿ ಪ್ರೌಢ ಶಾಲೆ ಮೈಗೂರ (ಪ.ಕೇ) ತಾ: ಜಮಖಂಡಿ ,ಜಿ: ಬಾಗಲಕೋಟ.**

ದಿನಾಂಕ : ೧೧ – ೦೨ –೨೦೧೬ **ಸಾಧನಾ ಪರೀಕ್ಷೆ –೪** ಅಂಕಗಳು :೨೦

ತರಗತಿ: ೧೦ ನೆಯ. **ವಿಷಯ : ಪ್ರಥಮ ಭಾಷೆ –ಕನ್ನಡ .** ಸಮಯ :೪೫ ನಿಮಿಷ

ಹಾ.ಸಂ: ವಿದ್ಯಾರ್ಥಿಯ ಹೆಸರು :

* ಸೂಕ್ತವಾದ ಉತ್ತರವನ್ನು ಆರಿಸಿ , ಕ್ರಮಾಕ್ಷರದೊಂದಿಗೆ ಬರೆಯಿರಿ ೧*೩=೩

೧. ' ಅವಳು ' ಎಂಬುದು ಯಾವ ಪುರುಷಾರ್ಥಕ ಸರ್ವನಾಮಕ್ಕೆ ಉದಾಹರಣೆಯಾಗಿದೆ.

ಅ) ಪ್ರಥಮ ಬ) ಮಧ್ಯಮ ಕ) ಉತ್ತಮ ಡ) ಅನ್ಯಪುರುಷ

ಉತ್ತರ:–..........................................................................................

೨. ' ಮಾಟ ' ಎಂಬುದು ಈ ವ್ಯಾಕರಣಾಂಶಕ್ಕೆ ಸಂಬಂಧಿಸಿದೆ .

ಅ) ಕೃದಂತ ಭಾವನಾಮ ಬ) ಕೃದಂತ ನಾಮ ಕ) ಕೃದಂತಾವ್ಯಯ ಡ) ಕೃನ್ನಾಮ

ಉತ್ತರ:–..........................................................................................

೩. ' ಕಪ್ಪು ' ಈ ಪದದ ವ್ಯಾಕರಣ ವಿಶೇಷ.

ಅ) ತದ್ಧಿತಾಂತ ನಾಮ ಬ) ತದ್ಧಿತಾಂತ ಭಾವನಾಮ ಕ) ತದ್ಧಿತಾಂತಾವ್ಯಯ ಡ) ಅವ್ಯಯ

ಉತ್ತರ:–..........................................................................................

*** ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ** **೧*೧=೧**

೪. ಪುಳ್ಳಿ ; ಕಟ್ಟಿಗೆ : : ನಿರ್ವಾಹ : ______________________

ಉತ್ತರ:–..........................................................................................

*ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧*೩=೩

೫. ದುಷ್ಟಬುದ್ಧಿಯ ತಂದೆಯ ಹೆಸರೇನು ?

ಉತ್ತರ:–..........................................................................................

..........................................................................................

೬. 'ಕಲ್ಲಲ್ ಕುಕ್ಕೂದಲ್ಲ ನೀರಲ್ ಸೆಳೆವುದಲ್ಲ ಎಲ್ಲೆಲ್ಲೂ ಕಂಡ್ರೂ ಮಡಿವಸ್ತ್ರ' ಈ ಒಗಟಿನ ಉತ್ತರವೇನು ?

ಉತ್ತರ :–..........................................................................................

..........................................................................................

೭. ಶಾನುಭೋಗರು ಇರಸಾಲಿಗಾಗಿ ಯಾವ ಊರಿಗೆ ಹೋಗಿದ್ದರು ?

ಉತ್ತರ:–..........................................................................................

..........................................................................................

*ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ ೨*೩=೬

೮ . ದು. ಸರಸ್ವತಿಯವರ ಅಭಿಪ್ರಾಯದಲ್ಲಿ ಸಂಕಟಕೆ ಗಡಿ ಇಲ್ಲ ಏಕೆ?

ಉತ್ತರ :–..........................................................................................

..........................................................................................

..........................................................................................

..........................................................................................

..........................................................................................

..........................................................................................

೯. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

ಉತ್ತರ :–..........................................................................................

೧೦.ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?

ಉತ್ತರ :-....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

*** ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. ೩*೧=೩**

೧೧. " ಅರಸುಗಳ ವಾಜಿಯಂ ಬಿಡು"

ಉತ್ತರ :-....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

*** ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1*4 =4(2+2)**

**೧೨.** ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರನ್ನೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಾ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯರೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**ಪ್ರಶ್ನೆಗಳು :**

1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

ಉತ್ತರ :-....................................................................................................